ಕರ್ನಾಟಕ ವಿಧಾನ ಸಭೆ

ಶುಕ್ರವಾರ ೧೭ನೇ ಜೂನ್ ೧೯೮೮

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೧೦–೦೫ ಗಂಟೆಗೆ ಸಭಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶೀರ್ಥಹಳ್ಳಿ ತಾಲ್ಲೂಕಿನ ಹಣಿಗೆರೆ ದೇವಸ್ಥಾನದ ಅಭಿವೃದ್ಧಿ

೯೯೧ (೨೪೫೯) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಧಾರ್ಮಿಕ ದತ್ತಿ ಹಾಗೂ ನಿಯಂತ್ರಿತ ಪ್ರಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತೀರ್ಥಹಳ್ಳಿ ತಾಲ್ಲೂಕು ಹಣಿಗೆರೆ ದೇವಸ್ಥಾನ ಮುಜರಾಯಿಗೆ ಸೇರಿದೆಯೇ ?

ಆ) ಹಾಗಿದ್ದಲ್ಲಿ ಅದರ ಆದಾಯ ಮತ್ತು ಖರ್ಚು ಎಷ್ಟು ?

ಇ) ಕಳೆದ ೩ ವರ್ಷಗಳಲ್ಲಿ ಹುಂಡಿಯಲ್ಲಿ ಶೇಖರಿಸಿದ ಹಣವೆಷ್ಟು ? (ಪ್ರತಿವರ್ಷದ ಜಮಾ ಖರ್ಚಿನ ವಿವರ ನೀಡುವುದು).

ಈ) ಸದರಿ ದೇವಸ್ಥಾನದ ಅಭಿವೃದ್ಧಿ ಕಾರ್ಯ ಯಾವ ಹಂತದಲ್ಲಿದೆ ?

ಶ್ರೀ ಕೆ ಅಮರನಾಥ ಶೆಟ್ಟಿ (ಮುಜರಾಯಿ ರಾಜ್ಯ ಮಂತ್ರಿಗಳು).—

ಅ) ಹೌದು. ಮುಜರಾಯಿ ಸಂಸ್ಥೆಯಾಗಿರುತ್ತದೆ.

ಆ) ಸದರಿ ಸಂಸ್ಥೆಯ ಆದಾಯ ಮತ್ತು ಖರ್ಚು ಈ ಕೆಳಕಂಡಂತೆ ಇದೆ.

ವರ್ಷ		ಆದಾಯ		ಖರ್ಚು
೧೯೮೫–೮೬	ರೂ.	೮೭,೫೧೦–೧೦	ರೂ.	೯,೪೭೦–೦೦
೧೯೮೬–೮೭	ರೂ.	೧,೨೧,೪೬೨–೦೦	ರೂ.	೫೨,೪೧೫–೦೦
೧೯೮೭–೮೮	ರೂ.	೧,೦೮,೯೯೭–೦೦	ರೂ.	೬೯,೨೧೧–೦೦

ಇ) ೧೯೮೫–೮೬ ರೂ. ೮೬,೪೩೬–೯೦
೧೯೮೬–೮೭ ರೂ. ೯೯,೦೬೪–೧೫
೧೯೮೭–೮೮ ರೂ. ೧,೦೨,೧೨೭–೦೦

ಈ) ಹಜರತ್ ದರ್ಗಾ ಸಂಸ್ಥೆಯ ಜೀರ್ಣೋದ್ಧಾರಕ್ಕೆ ರೂ. ೧,೮೦,೦೦೦ಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದು ಸರ್ಕಾರಿ ಅನುದಾನಕ್ಕೆ ಧಾರ್ಮಿಕ ದತ್ತಿ ಆಯುಕ್ತರಿಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿನಾಂಕ ೨೨–೮–೮೬ ರಂದು ಶಿಫಾರಸ್ಸು ಮಾಡಿರುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನನಗೆ ಉತ್ತರದ ಕಾಪಿ ಬಂದಿಲ್ಲ.

ಅಧ್ಯಕ್ಷರು.—ಇದು ಸಣ್ಣ ಡಿಪಾರ್ಟ್‌ಮೆಂಟ್. ಆ ರೀತಿ ಇದ್ದರೂ ಉತ್ತರ ತರಿಸಿಕೊಡುವುದಕ್ಕೆ ಆಗಲಿಲ್ಲ ಎಂದು ಹೇಳಿದರೆ ಹೇಗೆ ? You must pull up the officer. ಮಾನ್ಯ ಸ್ವಾಮಿರಾವ್ ರವರೇ, ತಾವು ಸಪ್ಲಿಮೆಂಟರಿ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಈ ದೇವಸ್ಥಾನ ಒಂದು ವಿಶಿಷ್ಟವಾದ ಹಾಗೂ ಒಂದು ವಿಶೇಷವಾದ ದೇವಸ್ಥಾನ ಕೂಡಾ ಆಗಿದೆ. ಹಿಂದೂಗಳು ಮತ್ತು ಮುಸ್ಲಿಮರು ಈ ಎರಡು ಜನಾಂಗದವರು ನೋಡಿಕೊಳ್ಳತಕ್ಕಂಥ ದೇವಸ್ಥಾನ ಇದಾಗಿದೆ. ಅನೇಕ ವರ್ಷಗಳಿಂದ ಇದರ ಲೆಕ್ಕಪತ್ರ ಹಾಗೂ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಸಾವಿರಾರು ಜನ ಬಂದು ಇಲ್ಲಿಗೆ ಹೋಗುತ್ತಿದ್ದರೂ ಕೂಡಾ ಇದರ ವ್ಯವಸ್ಥೆಯನ್ನು ಸರಿಯಾಗಿ ನೋಡುತ್ತಿಲ್ಲ. ಇದಕ್ಕೆ ವಕ್ಫ್ ಬೋರ್ಡ್‌ನಿಂದ ದುಡ್ಡು ಬಂದಿದೆ ಮತ್ತು ಮೆಜರಾಯಿ ಇಲಾಖೆ ಮತ್ತು ವಕ್ಫ್ ಬೋರ್ಡ್ ಇವೆರಡೂ ನೋಡಿಕೊಳ್ಳುತ್ತಿರುವುದರಿಂದ, ಇದು ಯಾವ ಇಲಾಖೆಗೆ ಸೇರಿದೆ ಎನ್ನುವುದೇ ಆರ್ಥವಾಗಿಲ್ಲ. ಒಂದು ವರ್ಷ ಆದಾಯ ಹೆಚ್ಚಿಗೆ ಬರೋತ್ತದೆ, ಒಂದು ವರ್ಷ ಆದಾಯ ಕಡಿಮೆ ಬರುತ್ತದೆ, ಇದರಿಂದ ಆದಾಯ ಎಲ್ಲಿಯಾದರೂ ಸೋರಿಹೋಗಿರಲೇಬೇಕು ಎಂದು ನನಗನ್ನಿಸುತ್ತದೆ. ಇದಕ್ಕೆ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಕೆ. ಅಮರನಾಥಶೆಟ್ಟಿ.—ಈ ದೇವಸ್ಥಾನದಲ್ಲಿ ಮುಸ್ಲಿಮರಿಗೆ ಇರುವಂಥ ದರ್ಗ ಕೂಡಾ ಇದೆ. ಇದು ಹಿಂದೂಗಳಿಗೆ ಬೇಕಾಗಿರುವಂಥ ದೇವಸ್ಥಾನ ಕೂಡಾ ಆಗಿದೆ. ಆ ಜಾಗದ ಬಗ್ಗೆ ನಾನೇ ಸ್ವತಃ ಪರಿಶೀಲನೆ ಮಾಡಿದ್ದೇನೆ. ಆ ಜಾಗವಲ್ಲಿ ಬಂದು ಉಳಿದುಕೊಳ್ಳುವವರಿಗೆ ಸರಿಯಾದ ಸವಲತ್ತು ಇಲ್ಲದೇ ಇರುವುದನ್ನು ಗಮನಿಸಿ ಅವರಿಗೆ ಬೇಕಾದ ಉಳಿದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಎಸ್ಟಿಮೇಟನ್ನು ಕೂಡಾ ತಯಾರು ಮಾಡಿ ಕಳುಹಿಸಲಿಕ್ಕೆ ಹೇಳಿದ್ದೇವೆ. ಎಸ್ಟಿಮೇಟ್ ಬಂದಿದೆ. ಆದಷ್ಟು ಬೇಗನೆ ಅವರಿಗೆ ಉಳಿದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತು ಇಲ್ಲಿಗೆ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ನನ್ನ ಜೊತೆಯಲ್ಲಿ ಇದ್ದ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಕೂಡಾ ಹೇಳಿದ್ದಾರೆ. ಈ ದೇವಸ್ಥಾನ ವಕ್ಫ್ ಮತ್ತು ಧಾರ್ಮಿಕದತ್ತಿಗೆ ಸಂಬಂಧಪಟ್ಟದೆಯೇ ಎಂದು ಹೇಳುವ ಬಗ್ಗೆ ಇದು ಸ್ವಲ್ಪ ಚರ್ಚೆಯಲ್ಲಿದೆ. ಇದು ಧಾರ್ಮಿಕ ಸಂಸ್ಥೆಗೆ ಬಂದು ಅಲ್ಲಿ ಕಡಿಮೆ ಆದಾಯ ಬಂದಿದೆ ಎಂಬ ಕಾರಣಕ್ಕಾಗಿ ಅಲ್ಲಿಗೆ ಈಗ ಅಡ್ಮಿನಿಸ್ಟ್ರೇಟರ್ ಒಬ್ಬರನ್ನು ಹಾಕಿದ್ದೇವೆ. ಈಗ ಅವರು ನೋಡಿಕೊಳ್ಳುತ್ತಿರುವುದರಿಂದ ಈಗ ಅಲ್ಲಿ ಒಳ್ಳೆಯ ಆದಾಯ ಬರುತ್ತಿದೆ. ಆದಷ್ಟು ಬೇಗನೆ ಈ ದೇವಸ್ಥಾನವನ್ನು ಉತ್ತಮಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಲ್ಲಿ ರಸ್ತೆ ಕೂಡ ಕೆಟ್ಟ ಸ್ಥಿತಿಯಲ್ಲಿದೆ. ಅದನ್ನು ಕೂಡಾ ಅಭಿವೃದ್ಧಿಪಡಿಸಬೇಕು.

ಶ್ರೀ ಕೆ. ಅಮರನಾಥಶೆಟ್ಟಿ.—ರಸ್ತೆ ತಪಾಗೆ ಸಂಬಂಧಪಟ್ಟಿಲ್ಲ. ಸಂಬಂಧಪಟ್ಟವರಿಗೆ ಅದರ ಬಗ್ಗೆ ತಿಳಿಸುತ್ತೇನೆ.

ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನೇಮಕಾತಿಗಳು

೯೯೨ (೨೦೬೬) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಚಾಲ್ತಿ ರಿಜಿಸ್ಟರುಗಳಲ್ಲಿ ನೋಂದಾಯಿಸಿಕೊಂಡಿರತಕ್ಕ ನಿಪುಣ ಮತ್ತು ಅನಿಪುಣ ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಇವರುಗಳ ಪೈಕಿ ೧೯೮೫–೮೬ ೧೯೮೬–೮೭ ಮತ್ತು ೧೯೮೭ರ ಸಾಲಿನಲ್ಲಿ ಸಾರ್ವಜನಿಕ ಪಲಯದ ಉದ್ಯಮಸಂಸ್ಥೆಗಳಲ್ಲಿ ನೇಮಕಗೊಂಡವರ ಸಂಖ್ಯೆ ಎಷ್ಟು ?

ಇ) ಈ ಅವಧಿಯಲ್ಲಿ ಖಾಸಗಿ ಉದ್ಯಮಗಳಲ್ಲಿ ಆರೆ ಸರ್ಕಾರಿ ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ನೇಮಕಗೊಂಡವರ ಸಂಖ್ಯೆ ಎಷ್ಟು ?

ಈ) ನೇಮಕಗೊಂಡಿರುವ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳೆಷ್ಟು ?